

# ರಣಬೀರನ ಗೆಳೆತನ!



ರಣಬೀರ್ ಕಪೂರ್ ಅದೃಷ್ಟ ಮತ್ತೆ ಖುಲಾಯಿಸಿದಂತಿದೆ. 'ರಾಕ್‌ಸ್ಟಾರ್' ಗೆದ್ದ ಬಳಿಕ ಉದ್ಯಮದಲ್ಲಿ ಸಾಕಷ್ಟು ಬೇಡಿಕೆ ಕುದುರಿಸಿಕೊಂಡಿರುವ ರಣಬೀರ್, ಜತೆಗೆ ಹೆಚ್ಚು ವೃತ್ತಿಪರ ಕೂಡಾ ಆಗುತ್ತಿರುವುದು ನಿರ್ಮಾಪಕರ ಮಧ್ಯೆ ಆತನ ಗೆಳೆತನವನ್ನು ಗಟ್ಟಿಗೊಳಿಸಿದೆ. ಚಿತ್ರರಂಗಕ್ಕೆ ಬಂದ ಆರಂಭದಲ್ಲಿ ಇದ್ದ ಪ್ಲೇಬಾಯ್ ಇಮೇಜ್‌ನಿಂದ ಹೊರಬಂದಿರುವ ರಣಬೀರ್ ಕಥೆಗೆ ಹೆಚ್ಚು ಮಹತ್ವ ಕೊಡುವುದನ್ನೂ ಕಲಿತಿದ್ದಾನೆ. ಮಾತ್ರವಲ್ಲ, ಸಹನಟಿಯರ ಜತೆಗೆ ಉತ್ತಮ ಬಾಂಧವ್ಯವನ್ನು ರೂಢಿಸಿಕೊಳ್ಳುವ ಬಗ್ಗೆಯೂ ಗಂಭೀರವಾಗಿದ್ದಾನೆ.

ಅಯಾನ್ ಮುಖರ್ಜಿ ಈ ಹಿಂದೆ 'ವೇಕಪ್ ಸಿಧ್' ಚಿತ್ರದ ಮೂಲಕ ರಣಬೀರ್‌ಗೆ ಹೊಸ ಇಮೇಜ್ ನೀಡಿದ್ದರು. ಆ ಚಿತ್ರದ ಸಾಮಾನ್ಯ ಸೇಲ್ಸ್‌ಮನ್‌ನ ಪಾತ್ರದಲ್ಲಿ ಸಖತ್ತಾಗಿ ನಟಿಸಿದ್ದ ರಣಬೀರ್, ತನ್ನಲ್ಲಿ ನಟನಾ ಪ್ರತಿಭೆಯೂ ಇದೆ ಎನ್ನುವುದನ್ನು ಸಾಬೀತುಪಡಿಸಿದ್ದ. ಆ ಬಳಿಕ ವೈವಿಧ್ಯಮಯ ಪಾತ್ರಗಳಲ್ಲಿ ಮಿಂಚಿದ್ದ. ಈಗ ಅಯಾನ್ ಮುಖರ್ಜಿ ತನ್ನ ಹೊಸ ಚಿತ್ರ 'ಯೆ ಜವಾನಿ ಹೈ ದಿವಾನಿ'ಯಲ್ಲಿ ರಣಬೀರ್‌ಗೆ ಮುಖ್ಯ ಪಾತ್ರವನ್ನು ನೀಡಿದ್ದಾನೆ. ವಿಷಯ ಅದಲ್ಲ; ಈ ಚಿತ್ರದಲ್ಲಿ ರಣಬೀರ್‌ನ ನಾಯಕಿ ಆಗಿರುವುದು ಹಳೆಯ ಗೆಳತಿ ದೀಪಿಕಾ ಪಡುಕೋಣೆ.

ಸಿದ್ದಾರ್ಥ ಮಲ್ಯ ಜತೆ ಪ್ರೀತಿಯ ಕೊಂಡಿಯನ್ನು ಕಡಿದುಕೊಂಡ ಬಳಿಕ ಏಕಾಂಗಿಯಾಗಿರುವ ದೀಪಿಕಾ, ಸಕಾಲಕ್ಕೆ ಹಳೇ ಗೆಳೆಯ ರಣಬೀರನ ಬಳಿಗೆ ಬಂದಿದ್ದಾಳೆ ಎನ್ನುವವರಿದ್ದಾರೆ. ಯಾಕೆಂದರೆ ರಣಬೀರ್ ಕೂಡಾ 2–3 ಪ್ರೇಮ ಪ್ರಕರಣಗಳಲ್ಲಿ ಸಿಲುಕಿ ಕಳೆದುಕೊಂಡು ಒದ್ದಾಡುತ್ತಿರುವವನೇ. ಸದ್ಯಕ್ಕೆ ಆತನೂ ಇನ್ನೊಬ್ಬ ಹಳೇ ಗೆಳತಿ ಕತ್ರೀನಾ ಕೈಫ್ ಜತೆಗೆ ಓಡಾಡುತ್ತಿದ್ದರೂ, ದೀಪಿಕಾ ಸಿಕ್ಕಿದ ಬಳಿಕ ಇವರಿಬ್ಬರ ಗೆಳೆತನ ಹೆಚ್ಚು ಗಾಢವಾದಂತಿದೆ. ಗೋವಾದಲ್ಲಿ ಕಳೆದ ವಾರ ಡೇವಿಡ್ ಧವನ್ ಮಗನ ಮದುವೆಯಲ್ಲಿ ರಣಬೀರ್ ಮತ್ತು ದೀಪಿಕಾ ಜತೆಯಾಗಿ ಕುಳಿತು ಪಟ್ಟಾಂಗ ಹೊಡೆದದ್ದು, ಆ ಬಳಿಕ ಲಾಸ್ ಏಂಜಲೀಸ್‌ನಲ್ಲಿ ಇಬ್ಬರೂ ಒಟ್ಟಿಗೇ ತಿರುಗಾಡಿದ್ದು ನೋಡಿದರೆ ಮತ್ತೆ ಇಬ್ಬರ ಮಧ್ಯೆ ನಿಕಟ ಸಂಬಂಧ ಬೆಳೆಯುತ್ತಿದೆ ಎನ್ನುವುದೇ ಎಲ್ಲರ ಭಾವನೆ. ಸದ್ಯಕ್ಕೆ ನೈನಿತಾಲ್‌ನಲ್ಲಿ ಶೂಟಿಂಗ್ ನಡೆದಿರುವುದು ಇಬ್ಬರ ಸಖ್ಯವನ್ನು ಇನ್ನಷ್ಟು ಗಾಢವಾಗಿಸಲು ನೆರವಾಗಬಹುದು.

ಗೋವಾದಲ್ಲಿ ಹೀಗೆ ಇಬ್ಬರೂ ಕೈ ಕೈ ಹಿಡಿದು ಕುಳಿತಿದ್ದರೆ ದೂರದ ಕ್ಯೂಬಾದಲ್ಲಿ ಶೂಟಿಂಗ್‌ನಲ್ಲಿ ತೊಡಗಿದ್ದ ಕತ್ರೀನಾ ಹಲ್ಲು ಕಡಿದಳಂತೆ! ಮಾತ್ರವಲ್ಲ, ಅನೂಷ್ಕಾ ಶರ್ಮಾ ಕೂಡಾ ಕೈ ಕೈ ಹಿಚುಕಿದ್ದಾಳಂತೆ. ಕತ್ರೀನಾಳದ್ದೇನೋ ಸರಿ, ಅನೂಷ್ಕಾಗೇಕೆ ಸಿಟ್ಟು ಎಂದಿರಾ? ಅಯಾನ್ ಮುಖರ್ಜಿಯ ಈ ಚಿತ್ರಕ್ಕೆ ಆರಂಭದಲ್ಲಿ ಡೇಟ್ ಇಲ್ಲ ಎಂದು ದೀಪಿಕಾ ನಿರಾಕರಿಸಿದ್ದಳು. ಆ ಬಳಿಕ ಅನೂಷ್ಕಾ ಜತೆ ಮಾತನಾಡಿದ ನಿರ್ದೇಶಕರು ಆಕೆಗೇ ಪಾತ್ರ ಪಕ್ಕಾ ಮಾಡಿ ಮಾಧ್ಯಮಗಳಿಗೂ ಸುದ್ದಿ ನೀಡಿದ್ದರು. 'ರಣಬೀರ್ ಜತೆ ನಟಿಸುವುದೇನು, ಡೇಟಿಂಗ್ ಮಾಡಲೂ ಸಿದ್ಧ' ಎಂದು ಅನೂಷ್ಕಾ ಪತ್ರಕರ್ತರ ಮುಂದೆ ಹಾಡಿ ಹೊಗಳಿದ್ದಳು. ಈಗ ನೋಡಿದರೆ ರಣಬೀರ್, ಅನೂಷ್ಕಾಗೆ ಸಖತ್ ಕೈಕೊಟ್ಟಂತಿದೆ!

ಈ ರಣಬೀರ್ ಯಾವ ಹುಡುಗಿಯ ಜತೆಗೆ ಯಾವಾಗ ಗೆಳೆತನ ಬೆಳೆಸುತ್ತಾನೋ ಗೊತ್ತಿಲ್ಲ.. ಎಂದು ಬಾಲಿವುಡ್ ಸುಂದರಿಯರು ಗೊಣಗಾಡುತ್ತಿದ್ದರೆ; 'ನಾನು ಈಗ ತುಂಬ ಪ್ರೊಫೆಷನಲ್ ಆಗಿದ್ದೇನೆ. ಎಲ್ಲರೂ ನನ್ನ ಗೆಳತಿಯರೇ' ಎಂದು ರಣಬೀರ್ ನಗುತ್ತಿದ್ದಾನೆ!

■ ಬಿಂದು